# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 04/06/2022 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಿಗಳು

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು. ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

1. ಹಾಜರಿದ ಅಧಿಕಾರಿಗಳು:
   - ಜ್ಯೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
   - ಬಿ. ಡಬ್ಲ್ಯೂ.ಎಸ್.ಎಸ್.ಬಿ ಇನ್ಸ್‌ಪೆಕ್ಟರ್
   - ಸಿನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
   - ರೆವೆನ್ಯೂ ಅಧಿಕಾರಿಗಳು
   - ಎಸ್.ಡಬ್ಲ್ಯೂ.ಡಿ ಅಧಿಕಾರಿಗಳು
   - ಬೆಸ್ಕಂ ಅಧಿಕಾರಿಗಳು

2. ಹಿಂದಿನ ಸಭೆಯ ನಡುವಳಿಯನ್ನು ಸಭೆಯಲ್ಲಿ ಚರ್ಚಿಸಿದಂತೆ ಸೂಕ್ತ ಕ್ರಮವಹಿಸಲು ಸಭೆಗೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರಿಗೆ ತಿಳಿಸಿದರು.

3. ವಿದ್ಯುತ್ ದೀಪ ನಿರ್ವಹಣೆ ಮತ್ತು ಪೋಲೀಸ್ ಇಲಾಖೆಗೆ ಸಂಬಂಧ ಪಟ್ಟ ಅಧಿಕಾರಿಗಳು ಹಾಜರಿರುವುದಿಲ್ಲ.

4. ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ವಾರ್ಡ್ ನಲ್ಲಿ ಮಸ್ಕಿಟೋಸ್‌ಗೆ ಸಂಬಂಧಿಸಿದಂತೆ ಮುಂಜಾಗ್ರಾತೆ ಕ್ರಮ ಕೈಗೊಳಾಗುತ್ತಿದ್ದು ಹಾಗೆಯೇ ಕೋವಿಡ್‌ವ್ಯಾಕ್ಸಿನ್ 60 ವರ್ಷ ದಾಟಿದವರಿಗೆ ಮತ್ತು ಫ್ರಂಟ್ ಲೇನ್ ವರ್ಕರ್‌ಗೆ ಬೂಸ್ಟರ್ ಡೋಸ್ ನೀಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

5. ನಾಗಪ್ಪ ಸ್ಟ್ರೀಟ್ ಮುಖ್ಯ ರಸ್ತೆಯಲ್ಲಿ ಪಾಟ್ ಹೋಲ್ಸ್‌ಗಳು ಕೂಡಲೆ ಮುಚ್ಚಲು ಕ್ರಮಕೈಗೊಳ್ಳಬೇಕೆಂದು ಕಾರ್ಯದರ್ಶಿಗಳಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.

6. ಬಸಪ್ಪ ಗಾರ್ಡನ್‌ನಲ್ಲಿ ಊಳು ತೆಗೆಯಲು ಕೂಡಲೆ ಕ್ರಮಕೈಗೊಳ್ಳಬೇಕೆಂದು ಕಾರ್ಯದರ್ಶಿಗಳಿಗೆ ನೋಡಲ್ ಅಧಿಕಾರಿಗಳು ತಿಳಿಸಿದರು.

7. ಕೃಷ್ಣಕುಮಾರ್ ರವರು ಮಾತಾನಾಡುತ್ತಾ ವಿವೇಕಾನಂದ ಬ್ಲಾಕ್ ನಲ್ಲಿ ಕೂಡಲೆ ಚೇಂಬರ್ ಸರಿಪಡಿಸಬೇಕು ಎಂದು ಸಭೆಯಲ್ಲಿದ್ದ ಬಿ.ಡಿಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ತಿಳಿಸಿದರು.

8. ಜಿಯೋ ದವರು ಹಗೆದು ಸ್ವಚ್ಛತೆ ಮಾಡದೆ ಪಾಟ್ ಹೋಲ್ಸ್ ಗಳನ್ನು ಮುಚ್ಚದೆ ಇರುವುದು ಕಂಡುಬಂದಿರುತ್ತದೆ ಆದ್ದರಿಂದ ಸದರಿಯವರನ್ನು ಕೆಲಸ ಮಾಡಲು ಬಿಡಬಾರದೆಂದು ಸಭೆಯಲ್ಲಿದ್ದ ಸದಸ್ಯರು ತಿಳಿಸಿದರು.

9. 2ನೇ ಮೈನ್ ಶೇಷಾದ್ರಿಪುರಂ ನಲ್ಲಿ 4 ಬೀದಿ ದೀಪಗಳನ್ನು ಅಳವಡಿಸಲಾಗಿದೆ. ಇನ್ನೂ 2 ಬೀದಿ ದೀಪ ಹಾಕಬೇಕೆಂದು ಸದಸ್ಯರು ಸಭೆಗೆ ತಿಳಿಸಿದರು.

10. ವಿವೇಕಾನಂದ ಬ್ಲಾಕ್ ನಲ್ಲಿ ಬೀದಿ ದಿಪಗಳನ್ನು ಅಳವಡಿಸಬೇಕೆಂದು ಕೋರಿದರು ಹಾಗೆಯೇ ಕಾವೇರಿ ಕುಡಿಯುವ ನೀರು ಬೇಗ ನಿಲ್ಲಿಸುತ್ತಾರೆ ಸ್ವಲ್ಪ ಸಮಯ ನೀಡಬೇಕೆಂದು ಕೋರಿದಾಗ ಹಾಜರಿದ್ದ ಅಧಿಕಾರಿಗೆ ನೋಡಲ್ ಅಧಿಕಾರಿಯು ಸ್ವಲ್ಪ ಸಮಯ ನೀರು ಬಿಡುವಂತೆ ಸೂಚಿಸಿದರು.

11. ಸಾರ್ವಜನಿಕ ಶೌಚಾಲಯ ಟೆಂಡರ್ ಫೈನಲೈಸ್ ಆಗದೆ ಸಮಸ್ಯ ಆಗಿದೆ ಸಂಬಂಧ ಪಟ್ಟವರಿಗೆ ಕೂಡಲೆ ಫೈನಲೈಸ್ ಮಾಡುವಂತೆ ನೋಡಲ್ ಅಧಿಕಾರಿ ತಿಳಿಸಿದರು.

12. ವಾರ್ಡ್ ಸಭೆಗೆ ಅಧಿಕಾರಿಗಳು ಮತ್ತು ಪೋಲಿಸ್ ಸಿಬ್ಬಂದಿಗಳು ಸರಿಯಾಗಿ ಹಾಜರಾಗುತ್ತಿಲ್ಲ ಆದ್ದರಿಂದ ಸಾರ್ವಜನಿಕರ ಕುಂದು-ಕೊರತೆಗಳು ಸರಿಯಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ವಾರ್ಡ್ ಸದಸ್ಯರು ನೋಡಲ್ ಅಧಿಕಾರಿಗೆ ತಿಳಿಸಿದರು. ನೋಡಲ್ ಅಧಿಕಾರಿಗಳು ಮತಾನಾಡುತ್ತ ಮುಂದಿನ ಸಭೆಗಳಿಗೆ ಕಡ್ಡಾಯವಾಗಿ ಹಾಜರಿರುವಂತೆ ಮುಂಚಿತವಾಗಿಯೇ ಸಭೆಯ ಸೂಚನಾ ಪತ್ರವನ್ನು ಸಂಬಂಧಪಟ್ಟವರಿಗೆ ನೀಡಬೇಕೆಂದು ವಾರ್ಡ್ ಇಂಜಿನಿಯರ್‌ಗಳಿಗೆ ಸೂಚಿಸಿದರು.

**ನೋಡಲ್ ಅಧಿಕಾರಿಗಳು**
**ವಾರ್ಡ್ ಸಂ.77,**
**ದತ್ತಾತ್ರೇಯ ದೇವಸ್ಥಾನ ವಾರ್ಡ್**

**ಪ್ರತಿಯನ್ನು:-**

1. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಪಶ್ಚಿಮ) ರವರ ಮಾಹಿತಿಗಾಗಿ ಸಲ್ಲಿಸಿದೆ.